ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು –1

ಸಂಖ್ಯೆ:–ಸಿ1(4)/ ದೈ.ಶಿ.ಗ್ರೇ–1.ಬ–134/2014–15 ದಿನಾಂಕ: 04–02–2016

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ,
ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ,
ಬೆಂಗಳೂರು –01.

ಮಾನ್ಯರೆ,

ವಿಷಯ: ಪ್ರೌಢ ಶಾಲಾ ಗ್ರೇಡ್–1 ದೈಹಿಕ ಶಿಕ್ಷಣ ಶಿಕ್ಷಕರಿಗೆ ಶಾಲಾ ಜೇಷ್ಠತೆ ಆಧಾರದ ಮೇರೆಗೆ ಹಾಲಿ ತೆರವಾಗುವ ಮುಖ್ಯೋಪಾಧ್ಯಾಯರ ಹುದ್ದೆಗೆ ಪ್ರಭಾರವನ್ನು ವಹಿಸುವ ಬಗ್ಗೆ.

ಉಲ್ಲೇಖ:1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಟಿಪ್ಪಣಿ ದಿ:07–09–15.
2. ಸರ್ಕಾರದ ಪತ್ರ ಸಂಖ್ಯೆ ಇಡಿ 192 ಎಲ್‌ಬಿಪಿ 2011 ದಿ: 24–08–2015.

*****

ಸರ್ಕಾರಿ ಪ್ರೌಢ ಶಾಲೆಯಲ್ಲಿ ನಿವೃತ್ತಿ/ಬಡ್ತಿಯಿಂದ ತೆರವಾಗುವ ಮುಖ್ಯ ಶಿಕ್ಷಕರ/ ಉಪಪ್ರಾಂಶುಪಾಲರ ಹುದ್ದೆಗೆ, ಗ್ರೇಡ್–1 ದೈಹಿಕ ಶಿಕ್ಷಣ ಶಿಕ್ಷಕರನ್ನು ಶಾಲಾ ಜೇಷ್ಠತಾ ಆಧಾರದ ಮೇರೆಗೆ ಪ್ರಭಾರವನ್ನು ನೀಡುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ಸಲ್ಲಿಸಲು ಉಲ್ಲೇಖ(2)ರ ಸರ್ಕಾರದ ಪತ್ರದಲ್ಲಿ ಸೂಚಿಸಲಾಗಿದೆ.

ಕರ್ನಾಟಕ ಸರ್ಕಾರಿ ಸೇವಾ ನಿಯಮ 32ರ ಟಿಪ್ಪಣಿಯಂತೆ, ಸರ್ಕಾರಿ ನೌಕರನು ಖಾಲಿ ಇರುವ ಹುದ್ದೆಯ ಪ್ರಸಕ್ತ ಕರ್ತವ್ಯಗಳ ಪ್ರಭಾರವನ್ನು ನೋಡಿಕೊಳ್ಳುವಂತೆ ನೇಮಕ ಮಾಡಬೇಕಾದರೆ, ಆತನು ಆ ಹುದ್ದೆಗೆ ಅನ್ವಯಿಸುವ ವೃಂದ ಮತ್ತು ನೇಮಕಾತಿ ನಿಯಮಗಳಿಗನುಸಾರವಾಗಿ ಆ ಹುದ್ದೆಯಲ್ಲಿ ಸ್ಥಾನಪನ್ನನಾಗಿ ಪದೋನ್ನತಿ ಪಡೆಯುವುದಕ್ಕೆ ಅರ್ಹನಾಗಿರಬೇಕು ಮತ್ತು ನಿಯಮ 68ರ ಟಿಪ್ಪಣಿಯಂತೆ ಒಬ್ಬ ಸರ್ಕಾರಿ ನೌಕರನು ತತ್ಸಮಾನ ಅಥವಾ ಅದಕ್ಕಿಂತ ಉನ್ನತ ಹುದ್ದೆಯನ್ನು ಹೊಂದಿದ್ದರೆ ಅಥವಾ ಅಂತಹ ಸರ್ಕಾರಿ ನೌಕರನು ಕೂಡಲೇ ಲಭ್ಯವಿದ್ದರೆ, ಅದೇ ಕಛೇರಿಯ ಒಬ್ಬ ನೌಕರನು ಪ್ರಭಾರವನ್ನು ನೀಡಲಿರುವ ಸರ್ಕಾರಿ ನೌಕರನ ನಿಕಟವರ್ತಿ ಕಿರಿಯ ಸರ್ಕಾರಿ ನೌಕರನಿದ್ದು, (Immediately junior to the Government servant) ಪ್ರಕರಣಕ್ಕನುಸಾರವಾಗಿ ಪ್ರೊಬೇಷನ್ ಅಥವಾ ಅಫೀಶಿಯೇಷನ್, ಅವಧಿಯನ್ನು ಪೂರೈಸಿದ್ದಲ್ಲಿ, ನಿಯಮಗಳಡಿಯಲ್ಲಿ ಅಂತಹ ಸರ್ಕಾರಿ ನೌಕರನನ್ನು ತನ್ನ ಕರ್ತವ್ಯಗಳ ಜೊತೆಗೆ ಇನ್ನೊಂದು ಕಛೇರಿಯ ಅಥವಾ ಹುದ್ದೆಯ ಪ್ರಭಾರದಲ್ಲಿ ಚಾಲ್ತಿ ಕರ್ತವ್ಯಗಳನ್ನು ನಿರ್ವಹಿಸಲು ನೇಮಕಾತಿ ಮಾಡಬಹುದು ಎಂದಿರುತ್ತದೆ.



kpeta.weebly.com

Scanned by CamScanner

ಸರ್ಕಾರದ ಆದೇಶ ಸಂಖ್ಯೆ ಇಡಿ 251 ಎಸ್ ಒ ಹೆಚ್ 2009 ದಿ: 22.01.2010ರ ಪ್ರಕಾರ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರೌಢ ಶಾಲಾ ವಿಭಾಗದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ಪೂರ್ಣ ಅಧಿಕಾರವನ್ನು ಉಪಪ್ರಾಂಶುಪಾಲರಿಗೆ ಮತ್ತು ಉಪಪ್ರಾಂಶುಪಾಲರ ಹುದ್ದೆ ಇಲ್ಲದಿರುವ ಕಡೆ ಪ್ರೌಢ ಶಾಲೆಯ ಹಿರಿಯ ಸಹ ಶಿಕ್ಷಕರಿಗೆ ವಹಿಸಲು ಆದೇಶಿಸಲಾಗಿದೆ. ಸರ್ಕಾರಿ ಪ್ರೌಢ ಶಾಲೆಗಳಲ್ಲಿ ನಿವೃತ್ತಿ, ಬಡ್ತಿ, ಮುಂತಾದ ಕಾರಣಗಳಿಂದ ಮುಖ್ಯ ಶಿಕ್ಷಕರ ಹುದ್ದೆ ತೆರವಾದಾಗ ಆ ಶಾಲೆಯ ಹಿರಿಯ ಸಹ ಶಿಕ್ಷಕರಿಗೆ ಪ್ರಭಾರ ನೀಡಬೇಕೆಂದು ಸರ್ಕಾರದ ಆದೇಶವಿರುತ್ತದೆ.

ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಹುದ್ದೆಯನ್ನು ಸಹ ಶಿಕ್ಷಕರ ಹುದ್ದೆಯ ತತ್ಸಮಾನ ಹುದ್ದೆಯೆಂದು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಇನ್ನೂ ಪರಿಗಣಿಸಿರುವುದಿಲ್ಲವಾದ್ದರಿಂದ ದೈಹಿಕ ಶಿಕ್ಷಣ ಶಿಕ್ಷಕರಿಗೆ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರೌಢ ಶಾಲಾ ವಿಭಾಗದ ಉಪ ಪ್ರಾಂಶುಪಾಲರ ಹುದ್ದೆಗೆ ಪ್ರಭಾರದಲ್ಲಿರಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ ಎಂದು ಈ ಕಛೇರಿಯ ಪತ್ರ ಸಂಖ್ಯೆ:-ಸಿ1(4)/ ದೈ.ಶಿ.ಗ್ರೇ-1.ಬ-134/2014-15 ದಿನಾಂಕ: 03-08-2015ರಲ್ಲಿ ಸಂಘದವರಿಗೆ ತಿಳಿಸಲಾಗಿದೆ (ಪ್ರತಿ ಲಗತ್ತಿಸಿದೆ).

ಈ ವಿಚಾರವಾಗಿ ಸರ್ಕಾರಕ್ಕೂ ಸಹ ಸಂಖ್ಯೆ ಸಿ1(4) ವರ್ಗಾವಣೆ-134/2014-15 ದಿನಾಂಕ 30-03-2015ರಲ್ಲಿ ಪತ್ರ ಬರೆದು (ಪ್ರತಿ ಲಗತ್ತಿಸಿದೆ) ವೈದ್ಯನಾಥನ್ ಸಮಿತಿಯ ಶಿಫಾರಸ್ಸನ್ನು ಸರ್ಕಾರ ಒಪ್ಪಿ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಿ ಅಂತಿಮವಾಗಿ ಅಂಗೀಕಾರವಾದಲ್ಲಿ ಮಾತ್ರ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ/ಉಪಪ್ರಾಂಶುಪಾಲರ ಹುದ್ದೆಗೆ ಗ್ರೇಡ್-1 ದೈಹಿಕ ಶಿಕ್ಷಣ ಶಿಕ್ಷಕರಿಗೆ ಶಾಲಾ ಜೇಷ್ಠತಾ ಆಧಾರದ ಮೇರೆಗೆ ಪ್ರಭಾರ ವ್ಯವಸ್ಥೆ ಮಾಡಲು ಅವಕಾಶವಾಗುತ್ತದೆ ಎಂಬ ಮಾಹಿತಿಯನ್ನು ಸಲ್ಲಿಸುತ್ತ ಈ ಸಂಬಂಧ ಸರ್ಕಾರದ ಹಂತದಲ್ಲಿ ಒಂದು ಸುತ್ತೋಲೆ ಹೊರಡಿಸಲು ಕೋರಲಾಗಿದೆ.

ತಮ್ಮ ನಂಬುಗೆಯ,

16/2/16

(ಕೆ.ಎಸ್.ಸತ್ಯಮೂರ್ತಿ)
ಆಯುಕ್ತರು.

16/2/16

kpeta.weebly.com

Scanned by CamScanner